ಕರಾಸಕೈಅನಿನಿ **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**

**(ಕರ್ನಾಟಕ ಸರ್ಕಾರದ ಒಂದು ಉದ್ಯಮ)**

**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010
ದೂರವಾಣಿ:080-23407011-25 ಇ–ಮೈಲ್:kssidcho@vsnl.com ವೆಬ್‌ಸೈಟ್:www.kssidc.co.in

ಸಮನ್ವಯ:ಪರಿಷ್ಕರಣೆ:ನೀರಿನ ದರ:2002/4537. ದಿನಾಂಕ: 26–03–2018

**ಕಛೇರಿ–ಆದೇಶ**

**ವಿಷಯ: ನೀರಿನ ದರ ಪರಿಷ್ಕರಣೆ ಬಗ್ಗೆ.**

ಉಲ್ಲೇಖ:
1. ಕಛೇರಿ ಆದೇಶ ಸಂಖ್ಯೆ ಸಮನ್ವಯ:ಪರಿಷ್ಕರಣೆ:ನೀರಿನ ದರ: 2015/6006 ದಿನಾಂಕ 20.03.2015.
2. ಕಛೇರಿ ಆದೇಶ ಸಮನ್ವಯ:ಪರಿಷ್ಕರಣೆ:ನೀರಿನ ದರ:2002/275 ದಿನಾಂಕ 22.04.2017

**************

ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖ(2)ರಲ್ಲಿನ ಕಛೇರಿ ಆದೇಶದಲ್ಲಿ ಈ ಹಿಂದೆ ನಿಗದಿಪಡಿಸಲಾಗಿದ್ದ ನೀರಿನ ದರದ ಮೇಲೆ ಶೇಕಡಾ 10 ರಷ್ಟು ಹೆಚ್ಚಳ ಮಾಡಿ ನೀರಿನ ದರವನ್ನು ದಿನಾಂಕ 01.04.2017 ರಿಂದ 31.03.2018ರವರೆಗೆ ಪರಿಷ್ಕರಣೆ ಮಾಡಲಾಗಿತ್ತು. ಅಂತೆಯೇ ಸದರಿ ನೀರಿನ ದರದ ಪರಿಷ್ಕರಣೆಯ ಹಾಲಿ ದರವು ದಿನಾಂಕ 31.03.2018ಕ್ಕೆ ಅಂತ್ಯಗೊಳ್ಳಲಿದ್ದು, **ನಿಗಮದ ವತಿಯಿಂದ ನೀರು ಸರಬರಾಜಿನ ವ್ಯವಸ್ಥೆ ಕಲ್ಪಿಸಲಾಗಿರುವ** ಕೈಗಾರಿಕಾ ವಸಾಹತುಗಳಲ್ಲಿ ಪ್ರಸ್ತುತ ಸಾಲಿನ ನೀರಿನ ದರವನ್ನು ಶೇಕಡ 10ರಷ್ಟು ಹೆಚ್ಚಳ ಮಾಡಿ ದಿನಾಂಕ 01.04.2018 ರಿಂದ 31.03.2019ರವರೆಗೆ 'ನೀರಿನ ದರ'ವನ್ನು ಕೆಳಕಂಡಂತೆ ಪರಿಷ್ಕರಿಸಲಾಗಿದೆ.

**I. ನೀರಿನ ಮಾಪಕ (Water Meter) ಇಲ್ಲದಿರುವ ಮಳಿಗೆಗಳಿಗೆ** (ರೂ.ಗಳಲ್ಲಿ)/ಪ್ರತಿ ತಿಂಗಳಿಗೆ)

| ಕ್ರಮ.ಸಂಖ್ಯೆ | ಮಳಿಗೆ ಮಾದರಿ | ಬೆಂಗಳೂರು/ಹುಬ್ಬಳ್ಳಿ/ ಮಂಗಳೂರು/ಮೈಸೂರು | | ಜಿಲ್ಲಾ ಕೇಂದ್ರ ಸ್ಥಳಗಳು | | ಇನ್ನಿತರ ಸ್ಥಳಗಳು | |
|---|---|---|---|---|---|---|---|
| | | 01.04.2017ರಿಂದ 31.03.2018 ರವರೆಗೆ ಚಾಲ್ತಿಯಲ್ಲಿರುವ ನೀರಿನ ಶುಲ್ಕ ದರ. | **01.04.2018 ರಿಂದ 31.03.2019 ರವರೆಗೆ ಪರಿಷ್ಕೃತ ದರ** | 01.04.2017ರಿಂದ 31.03.2018 ರವರೆಗೆ ಚಾಲ್ತಿಯಲ್ಲಿರುವ ನೀರಿನ ಶುಲ್ಕ ದರ. | **01.04.2018 ರಿಂದ 31.03.2019 ರವರೆಗೆ ಪರಿಷ್ಕೃತ ದರ** | 01.04.2017ರಿಂದ 31.03.2018 ರವರೆಗೆ ಚಾಲ್ತಿಯಲ್ಲಿರುವ ನೀರಿನ ಶುಲ್ಕ ದರ. | **01.04.2018 ರಿಂದ 31.03.2019 ರವರೆಗೆ ಪರಿಷ್ಕೃತ ದರ** |
| 1. | ಎ | 752.00 | **827.00** | 537.00 | **591.00** | 322.00 | **354.00** |
| 2. | ಬಿ | 537.00 | **591.00** | 322.00 | **354.00** | 216.00 | **238.00** |
| 3. | ಸಿ | 430.00 | **473.00** | 216.00 | **238.00** | 161.00 | **177.00** |
| 4. | ಡಿ | 257.00 | **283.00** | 161.00 | **177.00** | 109.00 | **120.00** |
| 5. | ಮಿನಿ/ ಸೂ.ಮಿನಿ | 109.00 | **120.00** | 109.00 | **120.00** | 87.00 | **96.00** |

...2

(ರೂಗಳಲ್ಲಿ)/ಪ್ರತಿ ತಿಂಗಳಿಗೆ)

## II. ನೀರಿನ ಮಾಪಕ (Water Meter) ಇಲ್ಲದಿರುವ ನಿವೇಶನಗಳಿಗೆ:

| ಕ್ರ ಸಂ. | ವಿಸ್ತೀರ್ಣತೆ | ಬೆಂಗಳೂರು/ಹುಬ್ಬಳ್ಳಿ/ ಮಂಗಳೂರು/ಮೈಸೂರು | | ಜಿಲ್ಲಾ ಕೇಂದ್ರ ಸ್ಥಳಗಳು | | ಇನ್ನಿತರ ಸ್ಥಳಗಳು | |
|---|---|---|---|---|---|---|---|
| | | 01.04.2017ರಿಂದ 31.03.2018 ರವರೆಗೆ ಚಾಲ್ತಿಯಲ್ಲಿರುವ ನೀರಿನ ಶುಲ್ಕ ದರ | **01.04.2018 ರಿಂದ 31.03.2019 ರವರೆಗೆ ಪರಿಷ್ಕೃತ ದರ** | 01.04.2017ರಿಂದ 31.03.2018 ರವರೆಗೆ ಚಾಲ್ತಿಯಲ್ಲಿರುವ ನೀರಿನ ಶುಲ್ಕ ದರ | **01.04.2018 ರಿಂದ 31.03.2019 ರವರೆಗೆ ಪರಿಷ್ಕೃತ ದರ** | 01.04.2017 ರಿಂದ 31.03.2018 ರವರೆಗೆ ಚಾಲ್ತಿಯಲ್ಲಿರುವ ನೀರಿನ ಶುಲ್ಕ ದರ | 01.04.2018 ರಿಂದ 31.03.2019 ರವರೆಗೆ ಪರಿಷ್ಕೃತ ದರ |
| 1. | 100ಚ.ಮೀ. ವರೆಗೆ | 216.00 | **238.00** | 161.00 | **177.00** | 109.00 | **120.00** |
| 2. | 101 ಚ.ಮೀ. ನಿಂದ 300 ಚ.ಮೀ. ವರೆಗೆ | 322.00 | **354.00** | 216.00 | **238.00** | 161.00 | **177.00** |
| 3. | 301 ಚ.ಮೀ. ನಿಂದ 500 ಚ.ಮೀ. ವರೆಗೆ | 430.00 | **473.00** | 322.00 | **354.00** | 216.00 | 238.00 |
| 4. | 501 ಚ.ಮೀ. ನಿಂದ 700 ಚ.ಮೀ ವರೆಗೆ | 537.00 | **591.00** | 430.00 | **473.00** | 322.00 | 354.00 |
| 5. | 701 ಚ.ಮೀ. ನಿಂದ 1000 ಚ.ಮೀ. ವರೆಗೆ | 642.00 | **706.00** | 537.00 | **591.00** | 430.00 | 473.00 |
| 6. | 1001 ಚ.ಮೀ. ಮೇಲೆ | 859.00 | **945.00** | 591.00 | **650.00** | 483.00 | 531.00 |

III. ನೀರಿನ ಮಾಪಕ (Water Meter) ಇರುವ ಮಳಿಗೆ/ನಿವೇಶನಗಳಿಗೆ ರೂ.37.00 ಪ್ರತಿ 1000 ಲೀಟರ್‌ಗೆ ಇದ್ದು, ಕನಿಷ್ಟ ರೂ. 354.00 ಪ್ರತಿ ತಿಂಗಳಿಗೆ ಬಹು ಮಹಡಿ ಕಟ್ಟಡಗಳಿಗೆ ಸಂಬಂಧಿಸಿದಂತೆ ಒಂದು ವೇಳೆ ಮೇಲಿನಂತೆ ನೀರಿನ ವಸೂಲಾತಿ ವೆಚ್ಚದ ಮೊತ್ತವು ನೀರಿನ ಸೌಲಭ್ಯವನ್ನು ಒದಗಿಸುವುದಕ್ಕೆ ತಗಲುವ ನೈಜ ವೆಚ್ಚಕ್ಕಿಂತ ಕಡಿಮೆಯಾದಲ್ಲಿ ನೈಜ ವೆಚ್ಚಕ್ಕೆ ಹೊಂದಾಣಿಕೆಯಾಗುವಂತೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

IV. ನೀರು ಆಧಾರಿತ ಕೈಗಾರಿಕಾ ಘಟಕಗಳು ಹಾಗೂ ನಿರ್ಮಾಣದ ಉದ್ದೇಶಕ್ಕಾಗಿ ನೀರಿನ ಬಳಕೆಗೆ, ಮೇಲಿನ ದರದ <u>ಇಮ್ಮಡಿ (ದುಪ್ಪಟ್ಟು)</u> ದರವನ್ನು ವಸೂಲು ಮಾಡತಕ್ಕದ್ದು.

V. ನೀರಿನ ಮಾಪಕ ಅಳವಡಿಸಿದ್ದು ಅದು ಕಾರ್ಯನಿರ್ವಹಿಸದೇ ಇರುವ ಸಂದರ್ಭಗಳಲ್ಲಿ ಹಿಂದಿನ 6 ತಿಂಗಳ ಸರಾಸರಿ ಅಥವಾ ನೀರಿನ ಮಾಪಕ ಇಲ್ಲದ ಸಂದರ್ಭಗಳಲ್ಲಿ ವಿಧಿಸುವ ದರ ಇವುಗಳಲ್ಲಿ ಯಾವುದು ಜಾಸ್ತಿ ಇರುವುದೋ ಆ ದರದಲ್ಲಿ ನೀರಿನ ಶುಲ್ಕವನ್ನು ವಸೂಲು ಮಾಡುವುದು. ಹಾಗೆಯೇ ಅಂತಹ ನೀರಿನ ಮಾಪಕಗಳನ್ನು ಜರೂರಾಗಿ ಹಂಚಿಕೆದಾರರಿಂದ ದುರಸ್ತಿ ಮಾಡಿಸತಕ್ಕದ್ದು.

VI. ಹಂಚಿಕೆದಾರರು ಮೂರು ತಿಂಗಳುಗಳ ಬಾಕಿಯನ್ನು ಪಾವತಿ ಮಾಡುವಲ್ಲಿ ವಿಫಲರಾದಲ್ಲಿ, ನೀರಿನ ಸಂಪರ್ಕ ಕಡಿತಗೊಳಿಸುವುದು. ನಂತರದಲ್ಲಿ ನೀರಿನ ಸಂಪೂರ್ಣ ಬಾಕಿಯನ್ನು ಬಡ್ಡಿ ಶೇ. 18 ರಷ್ಟು ಪಡೆಯುವುದರೊಂದಿಗೆ ರೂ. 1933/-ಗಳನ್ನು ಮರು ಸಂಪರ್ಕ ಶುಲ್ಕವನ್ನು ವಸೂಲು ಮಾಡಿದ ನಂತರದಲ್ಲಿಯೇ ನೀರಿನ ಸಂಪರ್ಕವನ್ನು ಮರು-ನೀಡುವುದು.

VII. ಹೊಸ ಸಂಪರ್ಕ ನೀಡುವ ಸಂದರ್ಭದಲ್ಲಿ ರೂ. 1933/- ಅನ್ನು <u>ಸಂಪರ್ಕ ದರವಾಗಿ</u> ಪಡೆಯತಕ್ಕದ್ದು.

VIII. ಯಾವುದೇ ಕೈಗಾರಿಕಾ ವಸಾಹತುವಿನಲ್ಲಿ ಮೇಲೆ ತಿಳಿಸಿರುವ ದರದಂತೆ ನೀರಿನ ದರವನ್ನು ವಸೂಲು ಮಾಡಿದಾಗ್ಯೂ ಸಹ ಖರ್ಚು ಹೆಚ್ಚಾದಲ್ಲಿ ಅದನ್ನು ಸರಿಹೊಂದಿಸಿಕೊಳ್ಳುವ ರೀತಿಯಲ್ಲಿ ನೀರಿನ ದರವನ್ನು ಸಂಬಂಧಪಟ್ಟ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕೈವ) ಇವರು ಪರಿಷ್ಕರಿಸಿ ಅದರಂತೆ ವಸೂಲು ಮಾಡುವುದು ಮತ್ತು ತತ್ಸಂಬಂಧದ ವಿಷಯದ ಬಗ್ಗೆ ಕೇಂದ್ರ ಕಛೇರಿಗೆ ಮಾಹಿತಿ ನೀಡತಕ್ಕದ್ದು.

ಸದರಿ ವಿಷಯದ ಬಗ್ಗೆ ಕಾಲಕಾಲಕ್ಕೆ ಸಂಬಂಧಪಟ್ಟ ಉಪ ಪ್ರಧಾನ ವ್ಯವಸ್ಥಾಪಕರವರು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದು ಹಾಗೂ ಆಂತರಿಕ ಲೆಕ್ಕ ಪರಿಶೋಧನಾ ವಿಭಾಗದವರು ಲೆಕ್ಕ ಪರಿಶೋಧನೆಗಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ವಿವರಗಳನ್ನೂ ಸಹ ತಪ್ಪದೇ ಪರಿಶೀಲಿಸತಕ್ಕದ್ದು.

IX. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರುಗಳು ಮತ್ತು ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳು ತಮ್ಮ ಆಡಳಿತ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಳಕೆದಾರರಿಗೆ **ಪರಿಷ್ಕೃತ ದರವು ಕಡ್ಡಾಯವಾಗಿ ದಿನಾಂಕ: 01.04.2018ರಿಂದ ಜಾರಿಗೆ ಬರುವುದೆಂದು** ಮತ್ತು ವಿಳಂಬಿತ ಪಾವತಿಯ ಮೇಲೆ ಶೇ. 18 ರಷ್ಟು ಬಡ್ಡಿ ಹಾಕಲಾಗುವುದೆಂಬ ವಿಷಯವನ್ನು ಸೂಕ್ತ ಸ್ವೀಕೃತಿಯೊಂದಿಗೆ ತಿಳಿಸಿ, ಅದರಂತೆ ನೀರಿನ ದರವನ್ನು ವಸೂಲಿ ಮಾಡತಕ್ಕದ್ದು.

X. ನೀರಿನ ದರ ಲೆಕ್ಕ ಹಾಕುವಾಗ ಪೈಸೆಗಳು ಬಂದಲ್ಲಿ ಮೊಬಲಗನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು.

ವ್ಯವಸ್ಥಾಪಕ ನಿರ್ದೇಶಕರು

ಅವರಿಗೆ,
1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ಬೆಳಗಾವಿ/ಕಲಬುರಗಿ/ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ದಾವಣಗೆರೆ/ಮಂಗಳೂರು/ವಿಜಯಪುರ/ಬಳ್ಳಾರಿ.

ಪ್ರತಿ:
1. ಪ್ರಧಾನ ವ್ಯವಸ್ಥಾಪಕರು(ಕೈವ) / (ಆಡಳಿತ, ಭೂಸ್ವಾಧೀನ & ವಾಣಿಜ್ಯ), (ಸಮನ್ವಯ&ಸಾ.ಸಂ), ಕರಾಸಕೈಅನಿನಿ, ಬೆಂಗಳೂರು
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು) / (ಆ.ಲೆ.ಪ) / (ಸಿಬ್ಬಂದಿ) / ವಲಯ-1 / ವಲಯ-2, ಕರಾಸಕೈಅನಿನಿ, ಬೆಂಗಳೂರು / ಹುಬ್ಬಳ್ಳಿ
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ವ&ಕಾಲೆ) / (ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಾಯಪಾಲಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಕಲಬುರಗಿ,
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಮೈಸೂರು/ಹುಬ್ಬಳ್ಳಿ/ ಬೆಳಗಾವಿ/ಕಲಬುರಗಿ/ಬಳ್ಳಾರಿ.
7. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು
8. ವ್ಯವಸ್ಥಾಪಕರು(ಕಾನೂನು), ಕರಾಸಕೈಅನಿನಿ, ಬೆಂಗಳೂರು.
9. ಅಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು
10. ಉಪಾಧ್ಯಕ್ಷರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.